


ಪ್ರಸಾದ್ ನಟರಾಜನ್

ಚಿತ್ರಕಲೆ ಮನುಷ್ಯನ ಕಣ್ಣಿಗೆ ಹಿಡಿದ ಕನ್ನಡಿ. ಮನುಷ್ಯ ತನ್ನ ಅನುಭವಗಳನ್ನು ಮತ್ತೊಮ್ಮೆ ಜೀವಗೊಳಿಸುವ ನಿಟ್ಟಿನಲ್ಲಿ ನಡೆಸುವ ಪ್ರಯತ್ನವೇ ಚಿತ್ರಕಲೆ. ವಸ್ತು, ರೇಖೆಗಳು, ಬಣ್ಣಗಳ ಸಂಯೋಜನೆ ಎಲ್ಲವೂ ಹದವಾಗಿ ಸಂಯೋಜನೆಗೊಂಡಾಗ ಕಲಾಕೃತಿ ಕಳೆಕಟ್ಟುತ್ತದೆ. ಚಿತ್ರಕಲೆ ಮೂರ್ತವಾಗಿರಲಿ, ಅಮೂರ್ತವೇ ಆಗಿರಲಿ, ವ್ಯಕ್ತಿಚಿತ್ರ, ಲ್ಯಾಂಡ್‌ಸ್ಕೇಪ್, ಪೆನ್ಸಿಲ್ ಸ್ಕೆಚ್ ಎಲ್ಲದರಲ್ಲೂ ಕುಸುರಿ ಕೆತ್ತನೆ ಇದ್ದರೆ ಮಾತ್ರ ಅದು ನೋಡುಗರ ಮನತಟ್ಟುತ್ತದೆ. ಇನ್ನು ರಿಯಲಿಸ್ಟಿಕ್ ಕಲಾಕೃತಿಗಳಂತೂ ಕಲಾವಿದನಿಂದ ಹೆಚ್ಚಿನ ಬದ್ಧತೆ ಬೇಡುವಂತಹವು. ನೋಡುಗರನ್ನು ಥಟ್ಟನೆ ಹಿಡಿದಿಡುವ ರಿಯಲಿಸ್ಟಿಕ್ ಚಿತ್ರಗಳ ಬಿಡಿಸಲಿಕ್ಕೆ ಅಸಾಧಾರಣ ಕೌಶಲ ಬೇಕು. ಜಾಣ್ಮೆ, ಬುದ್ಧಿವಂತಿಕೆ, ಬಣ್ಣಗಳ ಸಂಯೋಜನೆಯ ಲೆಕ್ಕಾಚಾರ ಅಗತ್ಯ. ಈ ಗುಣಗಳೆಲ್ಲವೂ ಮೇಳೈಸಿದ ಅಪರೂಪದ ಕಲಾವಿದ ಬೆಂಗಳೂರಿನ ಪ್ರಸಾದ್ ನಟರಾಜನ್.

ಭಾರತದ ಪ್ರಮುಖ ವನ್ಯಜೀವಿ ಮತ್ತು ಪ್ರಕೃತಿ ವರ್ಣಚಿತ್ರ ಕಲಾವಿದರಲ್ಲಿ ಪ್ರಸಾದ್ ನಟರಾಜನ್ ಒಬ್ಬರು. ಮುಖ್ಯವಾಗಿ ಚಾರ್ಕೋಲ್, ಪೆನ್ಸಿಲ್, ವಾಟರ್ ಕಲರ್ ಮತ್ತು ಅಕ್ರಲಿಕ್‌ಗಳನ್ನು ಬಳಸಿ ವನ್ಯಜೀವಿ ಮತ್ತು ಪ್ರಕೃತಿಯ ಚಿತ್ರಗಳನ್ನವರು ಕ್ಯಾನ್‌ವಾಸ್ ಮೇಲೆ ಮೂಡಿಸುತ್ತಾರೆ. ಅವರ ಕಾಂಟೂರ್ ಡ್ರಾಯಿಂಗ್ಸ್, ಔಟ್ ಡೋರ್ ಸ್ಕೆಚಿಂಗ್‌ಗಳೂ ಜನಪ್ರಿಯ.

ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಪ್ರಸಾದ್ ಬಿ.ಕಾಂ. ಪದವೀಧರರು. ಪ್ರಸ್ತುತ ವನ್ಯಜೀವಿ ಮತ್ತು ಪ್ರಕೃತಿ ಚಿತ್ರಕಲಾವಿದರ ಸಂಸ್ಥೆಯೊಂದರ (AWN— Artists for Wildlife and Nature) ಮುಖ್ಯಸ್ಥರಾಗಿದ್ದಾರೆ. ಡೆಸರ್ಟ್ ಕ್ಯಾಟ್, ಕಿಂಗ್‌ಫಿಶರ್, ರೂಸ್ಟರ್ ಮುಂತಾದ ಚಿತ್ರಗಳು ಇವರ ಸೃಜನಶೀಲತೆಯಲ್ಲಿ ಅರಳಿವೆ. ವನ್ಯಜೀವಿಗಳು, ಸಾಕುಪ್ರಾಣಿಗಳು, ಪಕ್ಷಿಗಳು, ತರುಲತೆಗಳು, ಫಲಪುಷ್ಪಗಳು ಅವರ ಸೃಜನಶೀಲತೆಯಲ್ಲಿ ನೈಜವೆನ್ನುವಷ್ಟು ಸಹಜವಾಗಿ